ವೈದ್ಯಕೀಯ ಕಾಲೇಜುಗಳು ಸ್ಥಾಪನೆ

2326 - ಎಂ.ವಿ ವೆಂಕಟಪ್ಪ (ಮುಳಬಾಗಿಲು) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರದ ಮುಂದೆ ಖಾಸಗಿಯವರಿಂದ ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಲು ಅನುಮತಿ ಕೋರಿ ಬಂದಿರುವ ಅರ್ಜಿಗಳೆಷ್ಟು (ವಿವರಗಳನ್ನೊದಗಿಸುವುದು)

ಆ) ಈ ಅರ್ಜಿಗಳ ಪೈಕಿ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಗಳ ಅನ್ವಯ ಅನುಮತಿ ಕೊಡುವಂತಹ ಅರ್ಜಿದಾರರ ಹೆಸರುಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು):

ಅ) 22 ಅವುಗಳು ಯಾವುವೆಂದರೆ

1) ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ ಚಿತ್ರದುರ್ಗ

2) ಸಿದ್ಧಗಂಗಾ ಎಜುಕೇಷನ್ ಸೊಸೈಟಿ ತುಮಕೂರು.

3) ಆಲ್ ಮಹಮದ್ ಸೊಸೈಟಿ ಭದ್ರಾವತಿ

4) ಅಕಡೆಮಿ ಆಫ್ ಲಿಬರಲ್ ಎಜುಕೇಷನ್ ಸುಳ್ಯ ಡಿ.ಕೆ

5) ಶರಭೇಶ್ವರ ವಿದ್ಯಾಪೀಠ ಬಳ್ಳಾರಿ

6) ನಿಟ್ಟೆ ಎಜುಕೇಷನ್ ಟ್ರಸ್ಟ್ ಕಾರ್ಕಳ ಡಿ.ಕೆ.

7) ಕರ್ನಾಟಕ ಲಾ ಸೊಸೈಟಿ ಬೆಳಗಾಂ

8) ಮಲೆನಾಡು ಮೆಡಿಕಲ್ ಕಾಲೇಜು (ಬಿ.ಆರ್.ಅಂಬೇಡ್ಕರ್ ಮಿಷನ್) ಶಿವಮೊಗ್ಗ

9) ರಾಷ್ಟ್ರೀಯ ಶಿಕ್ಷಣ ಸಮಿತಿ ಶಿವಮೊಗ್ಗ

10) ಫಾದರಮುಲ್ಲರ್ ಇನ್ಸ್‌ಟ್ಯೂಟ್ ಕಂಕನಾಡಿ ಮಂಗಳೂರು

11) ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಶಿವಮೊಗ್ಗ

12) ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ ಹಾಸನ

13) ತಾರನಾಥ ಶಿಕ್ಷಣ ಸಂಸ್ಥೆ ರಾಯಚೂರು

14) ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ. ಬೀದರ್

15) ಖಾಜಾ ಶಿಕ್ಷಣ ಸಂಸ್ಥೆ ಗುಲ್ಬರ್ಗ

16) ಆಲ್ ಮಹಮದ್ ವಿದ್ಯಾಸಂಸ್ಥೆ ಶಿವಮೊಗ್ಗ

17) ಶರಭೇಶ್ವರಿ ವಿದ್ಯಾಪೀಠ ಬಂಡಿಪೋಟ್ ಬಳ್ಳಾರಿ.

18) ನಾನಕ್ ಜೀರ್ ಫೌಂಡೇಶನ್ ಬೀದರ್

19) ಜಗದ್ಗುರು ಮೂರು ಸಾವಿರದ ಮಠ ಜೆ.ಜೆ. ಸಹಕಾರ ಸಂಘ ರೂರಲ್ ಮೆಡಿಕಲ್ ಕಾಲೇಜು ಹುಬ್ಬಳ್ಳಿ

20) ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ ಶಿವಮೊಗ್ಗ

21) ಚಾಮುಂಡಿ ಮೆಡಿಕಲ್ ಫೌಂಡೇಶನ್ ಬೆಂಗಳೂರು

22) ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿ ಗುಲ್ಬರ್ಗಾ

ಆ) ವೈದ್ಯಕೀಯ ಕಾಲೇಜುಗಳು ಸ್ಥಾಪಿಸಲು ಮಂಜೂರಾತಿ ನೀಡದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಉತ್ತರದಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಮಂಜೂರಾತಿ ನೀಡದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ ಕೆಲವು ಮಾಡಲೇಬೇಕು ಎಂದು ಕೋರ್ಟ್‌ನಿಂದ ತಮಗೆ ಡೈರೆಕ್ಷನ್ ಬಂದಿದೆ. ಮಾಡಲೇಬೇಕು ಎಂದು ಹೇಳಿದ್ದಾರೆಯೇ ಅಥವಾ ಕೋರ್ಟಿನವರು ಏನು ಹೇಳಿದ್ದಾರೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ : ಸನ್ಮಾನ್ಯ ಅಧ್ಯಕ್ಷರೇ ಅವರ ಅರ್ಜಿಗಳನ್ನು ತಾವು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಿ ಎಂದು ಆದೇಶ ಕೊಟ್ಟಿದ್ದಾರೆ. ಆದರೆ ನಮ್ಮಲ್ಲಿ ಹೊಸ ಮೆಡಿಕಲ್ ಕಾಲೇಜುಗಳನ್ನು ಕೊಡತಕ್ಕಂಥ ನೀತಿ ಪ್ರಸ್ತುತ ಪರಿಸ್ಥಿತಿಯಲ್ಲಿ ಇಲ್ಲದೇ ಇರುವುದರಿಂದ ಕೋರ್ಟಿನಿಂದ ಬಂದಂತಹ ನಿರ್ದೇಶನಗಳನ್ನು ನಾವು ಪರಿಶೀಲಿಸುವ ಮಟ್ಟದಲ್ಲಿ ಇಲ್ಲ ನಾವು ಈಗಾಗಲೇ ತಿರಸ್ಕರಿಸಿದ್ದೇವೆ.

ಶ್ರೀ ಎಂ.ವಿ ವೆಂಕಟಪ್ಪ : ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ 6-7 ಸಾವಿರ ಜನ ವೈದ್ಯಕೀಯ ವಿದ್ಯಾರ್ಥಿಗಳು ನಿರುದ್ಯೋಗಿಗಳಾಗಿದ್ದಾರೆ. ಇಂಥ ಸಮಯದಲ್ಲಿ ಪುನಃ ಕಾಲೇಜುಗಳು ಪ್ರಾರಂಭವಾಗುವುದರಲ್ಲಿ ಅರ್ಥವಿಲ್ಲ ಆದ್ದರಿಂದ ಇದರ ಬಗ್ಗೆ ತಮ್ಮ ನಿರ್ದಿಷ್ಟವಾದ ನಿಲುವು ಏನು ಸರ್ಕಾರ ಎಷ್ಟು ವರ್ಷ ಕಾಲೇಜುಗಳನ್ನು ಪ್ರಾರಂಭ ಮಾಡುವುದಿಲ್ಲ ಅಥವಾ ಒತ್ತಡ ಬಂದಾಗ ಮಾಡುತ್ತೀರಾ ಹೇಗೆ ಏನು ಎಂದು ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಸನ್ಮಾನ್ಯ ಅಧ್ಯಕ್ಷರೇ 1990ನೇ ಇಸವಿಯಲ್ಲಿ ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಇನ್ನುಮುಂದೆ ಮೂರು ವರ್ಷಗಳ ಕಾಲ ಹೊಸ ವೈದ್ಯಕೀಯ ಕಾಲೇಜುಗಳಿಗೆ ನಾವು ಮಂಜೂರಾತಿ ಕೊಡುವುದಿಲ್ಲವೆಂದು ಸಚಿವಸಂಪುಟದ ಸಭೆಯಲ್ಲಿ ತಿರ್ಮಾನ ಮಾಡಿದ್ದಾರೆ. ಆ ಒಂದು ತೀರ್ಮಾನ ಇವತ್ತು ಕೂಡ ನಾವು ಜಾರಿಯಲ್ಲಿ ತಂದಿದ್ದೇವೆ ಈವರೆಗೆ ನಾವು ಯಾವ ಹೊಸ ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ಕೊಟ್ಟಿಲ್ಲ.

ಎ.ಬಿ. ಮಲಕರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ ಈ ಕೋರ್ಟಿನ ನಿರ್ದೇಶನ ಬಂದಿದೆ ಎಂದು ಈಗಾಗಲೇ ಹಿಂದಿನ ಸರ್ಕಾರಗಳು ಎರಡು ಮೆಡಿಕಲ್ ಕಾಲೇಜುಗಳನ್ನು ಕೊಟ್ಟಿದ್ದಾರೆ. ಒಂದು ಬಿಜಾಪುರ ಮೆಡಿಕಲ್ ಕಾಲೇಜು ಕೊಟ್ಟಿದ್ದಾರೆ. ಇನ್ನೊಂದು ತುಮಕೂರು ಮೆಡಿಕಲ್ ಕಾಲೇಜು ಕೊಟ್ಟಿದ್ದಾರೆ. ಈಗ ಸದ್ಯಕ್ಕೆ ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಆದರೆ ಯಾವ ಘಳಿಗೆಯಲ್ಲಿ ಯಾವ ಕ್ಷಣದಲ್ಲಿ ಯಾವ ಸಮಯದಲ್ಲಿ ಪುನಃ ಕೋರ್ಟ್ ನಿರ್ದೇಶನ ಬಂದಿದೆ ಎಂದು ತಿಳಿದುಕೊಂಡು ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತದೋ ಏನೋ ನಮಗೆ ಗ್ಯಾರೆಂಟಿ ಇಲ್ಲ ಕಾರಣ ಇಷ್ಟೆ ಹೋದವಾರ ಮೂರು ಡೆಂಟಲ್ ಕಾಲೇಜುಗಳಿಗೆ ಅನುಮತಿ ಕೊಟ್ಟಿದ್ದಾರೆ ಐದು ಬಿ-ಫಾರ್ಮ ಕಾಲೇಜುಗಳನ್ನು ಕೊಟ್ಟಿದ್ದೀರಿ ಇದರ ಅವಶ್ಯಕತೆ ಏನಿತ್ತು? ಕೋರ್ಟ್ ನಿರ್ದೇಶನ ಕೊಟ್ಟಿದೆ ಎಂದು ತಾವು ತಿಳಿಸುತ್ತೀರಿ ಯಾವ ಗ್ರೌಂಡ್ ಮೇಲೆ ನಿರ್ದೇಶನ ಕೊಟ್ಟರು ಎನ್ನುವುದನ್ನು ದಯಮಾಡಿ ತಿಳಿಸುತ್ತೀರಾ?

ಶ್ರೀ ಜಿ. ಪುಟ್ಟಸ್ವಾಮಿಗೌಡ : ಸನ್ಮಾನ್ಯ ಅಧ್ಯಕ್ಷರೇ ನಾನು ಮೊದಲೆ ಸ್ಪಷ್ಟಪಡಿಸಿದಂತೆ ನಾವು ಯಾವುದೇ ಹೊಸ ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ಕೊಟ್ಟಿಲ್ಲ ಡೆಂಟಲ್ ಮತ್ತು ಬಿ-ಫಾರ್ಮ ಕಾಲೇಜುಗಳಿಗೆ ಅನುಮತಿ ಕೊಟ್ಟಿದ್ದೀರಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. 1990ನೇ ಇಸವಿಯಲ್ಲಿ ಈ ರಾಜ್ಯದಲ್ಲಿ

ಫಾರ್ಮಸಿ ಕಾಲೇಜುಗಳನ್ನು ಮತ್ತು ದಂತ ಕಾಲೇಜುಗಳನ್ನು ತೆಗೆಯತಕ್ಕಂಥ ಅವಕಾಶ ಇದೆಯೇ ಎನ್ನತಕ್ಕಂಥ ವಿಷಯದ ಬಗ್ಗೆ ಒಂದು ಸಬ್‌ಕಮಿಟಿಯನ್ನು ರಚನೆ ಮಾಡಿದ್ದರು. ಆ ಸಬ್ ಕಮಿಟಿಯಲ್ಲಿ ತೀರ್ಮಾನ ಮಾಡಿದ್ದಾರೆ. ಮೆಡಿಕಲ್ ಕಾಲೇಜುಗಳು ಹೆಚ್ಚು ಇರತಕ್ಕಂಥಾದ್ದರಿಂದ ಪ್ಯಾರಾ ಮೆಡಿಕಲ್‌ಅನ್ನು ಕೂಡ ನಾವು ಹೆಚ್ಚು ಮಾಡಬೇಕಾಗುತ್ತದೆ ಈ ಒಂದು ದಿಸೆಯಲ್ಲಿ ನಾವು ಬಹಳ ಹಿಂದೆ ಬಿದ್ದಿದ್ದೇವೆ ಇದಕ್ಕೆ ಅನುಮತಿ ಕೊಡಬೇಕು ಎಂದು ತೀರ್ಮಾನ ಮಾಡಿದ್ದಾರೆ ಈ ಒಂದು ತೀರ್ಮಾನದ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಹೇಳಿದಹಾಗೆ ಮೂರು ಹೊಸ ದಂತ ಕಾಲೇಜುಗಳಿಗೆ ಅನುಮತಿಯನ್ನು ಕೊಡಲಾಗಿದೆ ಮತ್ತು 5 ಫಾರ್ಮಸಿ ಕಾಲೇಜುಗಳಿಗೆ ಅನುಮತಿ ಕೊಡಲಾಗಿದೆ ಆದ್ದರಿಂದ ಅದಕ್ಕೂ ಮತ್ತು ಇದಕ್ಕೂ ಯಾವುದೇ ವಿಧವಾದಂಥ ಸಂಬಂಧ ಇಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಮೂರು ವರ್ಷಗಳಕಾಲ ಮಾತ್ರ ಮೆಡಿಕಲ್ ಕಾಲೇಜುಗಳನ್ನು ಕೊಡಬಾರದು ಎನ್ನತಕ್ಕಂಥ ಒಂದು ನೀತಿಯನ್ನು ನಾವು ಹಾಕಿಕೊಂಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಆ ಮೂರು ವರ್ಷಗಳಲ್ಲಿ ಈಗಾಗಲೇ ಎರಡು ವರ್ಷ ಕಳೆದಿದೆ. ಇನ್ನು ಉಳಿದಿರತಕ್ಕಂತಾದ್ದು ಒಂದು ವರ್ಷ ಈ ವರ್ಷ ಮುಗಿಯಿತು. ಮುಂದಿನ ವರ್ಷ ಹೊಸ ಮೆಡಿಕಲ್ ಕಾಲೇಜುಗಳಿಗೆ ಅನುಮತಿ ಕೊಡುತ್ತೀರೋ ಬಿಡುತ್ತೀರೋ? ಈಗ ಮೂರು ವರ್ಷ ಅನುಮತಿ ಕೊಡಬಾರದು ಎಂಬ ನೀತಿ ಇದೆ ಇದನ್ನು ಇನ್ನೊಂದು ಮೂರು ವರ್ಷ ವಿಸ್ತರಣೆ ಮಾಡುತ್ತಿರೋ ಏನು ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಅಧ್ಯಕ್ಷರು : ಇದು ಹೈಪೋಥೆಟಿಕಲ್ ಪ್ರಶ್ನೆ ಸಂಸದೀಯ ಪರಂಪರೆಯಲ್ಲಿ ಹೈಪೊಥೆಟಿಕಲ್ ಪ್ರಶ್ನೆಗೆ ಸರ್ಕಾರ ಉತ್ತರ ಕೊಡಬೇಕಾದಂಥ ಅವಶ್ಯಕತೆ ಇಲ್ಲ. ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಮುಂದಿನ ವರ್ಷ ಹೇಳಬಹುದು.

ಶ್ರೀ ಮಾಟಾಳ್ ನಾಗರಾಜ್ : ಸ್ವಾಮಿ ಈ ವೈದ್ಯಕೀಯ ಕಾಲೇಜುಗಳನ್ನೆನೋ ಈಗ ವಿಪರೀತ ತೆಗೆಯುತ್ತಿದ್ದಾರೆ ಈ ಕ್ಯಾಪಿಟೇಷನ್ ಶುಲ್ಕವನ್ನು ಸರ್ಕಾರದವರು ನಿಗದಿ ಮಾಡಿದ್ದಾರಲ್ಲಾ ಆ ನಿಗದಿ ಪ್ರಕಾರವೇ ಅವರು ಬರೀ ಶುಲ್ಕವನ್ನು ತೆಗೆದುಕೊಳ್ಳುತ್ತಿದ್ದಾರೋ? ಜೊತೆಗೆ ಕ್ಯಾಪಿಟೇಶನ್ ಎಂದು ಅದು ಬೇರೆ ಇನ್ನೊಂದು ಹೊಸ ರೀತಿಯಲ್ಲಿ ಇರುತ್ತದೆ ಅದು ಯಾರಿಗೂ ಗೊತ್ತಿಲ್ಲ ಇರತಕ್ಕ ಅಗೋಚರವಾದಂಥ ಗಂಟು ತಮಗೆ ಗೊತ್ತಿರಬಹುದು ಹೊರಗಡೆ ದೇಶದವರಿಗೆ 10 ಲಕ್ಷ ನಮ್ಮ ದೇಶದವರಿಗೆ 8 ಲಕ್ಷ ನಮ್ಮ ರಾಜ್ಯದವಗೆ 6 ಲಕ್ಷ ರೂಪಾಯಿ ಈ ತರಹ ಏನೋ ದೊಡ್ಡದಾಗಿ ನಡೆಯುತ್ತಿದೆ. ಇದು ನಿಮ್ಮ ಕಣ್ಣಿಗೆ ಏನಾದರೂ ಕಂಡಿದೆಯೇ? ಆತ್ಮಸಾಕ್ಷಿಯಾಗಿ ನಿಮ್ಮ ಕಣ್ಣಿಗೆ ಏನಾದರೂ ಕಾಣುತ್ತಿದೆಯೇ ಅಥವಾ ಕಂಡಿಲ್ಲವೋ? ಕಂಡಿದ್ದರೆ ಇದನ್ನು ನಿಲ್ಲಿಸುವುದಕ್ಕೆ ಏನಾದರೂ ಪ್ರಯತ್ನ ಪಟ್ಟಿದ್ದೀರಾ?

ಅಧ್ಯಕ್ಷರು : ಅವರು ಏನು ಕಾಣಬೇಕಾಗಿತ್ತು.

ಶ್ರೀ ಮಾಟಾಳ್ ನಾಗರಾಜ್ : ಹಣ ಹಣದ ವ್ಯವಹಾರ ಇದೆಯಲ್ಲಾ ಸ್ವಾಮಿ.

ಅಧ್ಯಕ್ಷರು : ಹಣಕ್ಕೂ ಆತ್ಮಕ್ಕೂ ಏನು ಸಂಬಂಧ?

ಶ್ರೀ ವಾಟಾಳ್ ನಾಗರಾಜ್ : ಅಲ್ಲೇ ಸ್ವಾಮಿ ಸಂಬಂಧ ಇರುವುದು ನಾನು ಹೇಳುವುದು ಬಹಳ ಗೂಡಾರ್ಥ ಈ ಆತ್ಮ ಇದೆಯಲ್ಲ.....

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ಗೂಡಾರ್ಥ ಎಂಥಾದ್ದು.

ಶ್ರೀ ವಾಟಾಳ್ ನಾಗರಾಜ್ : ಅದು ಬಹಿರಂಗವಾಗಲಿ ಎಂದು ನಾನು ಹೇಳುತ್ತಿರುವುದು ಆತ್ಮ ಶೋಧನೆ ಮಾಡಿ ಬಹಿರಂಗ ಮಾಡಿ ಹೇಳಿ ಎಂದು ಹೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರಕ್ಕೆ ನೀತಿ ಇದೆಯೇ ಏನು ಎಂದು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧಕ್ಷ್ಯರೇ ಈ ವಿಷಯ ಪ್ರಸ್ತಾವನೆ ಇರತಕ್ಕಂಥಾದ್ದು ಹೊಸ ವೈದ್ಯಕೀಯ ಕಾಲೇಜುಗಳನ್ನು ತೆರೆಯತಕ್ಕಂಥಾದ್ದರ ಬಗ್ಗೆ ಅಷ್ಟಕ್ಕೆ ಸೀಮಿತಮಾಡಿ ಉತ್ತರ ಕೊಟ್ಟಿದ್ದೇನೆ. ಕ್ಯಾಪಿಟೇಷನ್ ಬಗ್ಗೆ ಮಾನ್ಯ ಸಿಂಧ್ಯ ಅವರು ಈಗಾಗಲೇ ಪ್ರಶ್ನೆಯನ್ನು ಕಳುಹಿಸಿದ್ದಾರೆ. ಬಹುಶಃ ಆ ಕಾಲದಲ್ಲಿ ಇದನ್ನು ಪ್ರಸ್ತಾಪ ಮಾಡಬಹುದು ಎಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸಿಂಧ್ಯಾ ಸನ್ಯಾಸ್ಯ ಅಧ್ಯಕ್ಷರೇ ಇಲ್ಲಿ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ರೆಕಗ್‌ನಿಷನ್ ಕೊಡಬೇಕು ಎನ್ನತಕ್ಕಂಥ ಮಾತು ಇದೆ. ಈ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಡೆಲ್ಲಿಯಿಂದ ಇಲ್ಲಿಗೆ ಬಂದಾಗ ಇದನ್ನು ರೆಕಗ್ನೈಸ್ ಮಾಡಬೇಕೆ ಬಿಡಬೇಕೆ ಎಂದು ಗೌಶ್ಮೆಂಟಿನ ರೆಕಮೆಂಡೇಷನ್ ಏನಾದರೂ ಕೇಳುತ್ತಾರೆಯೇ? ಅಥವಾ ಅವರು 4 ಸೀಟುಗಳು 5 ಸೀಟುಗಳು 10 ಸೀಟುಗಳು ತೆಗೆದುಕೊಂಡು ರೆಕಗ್‌ನಿಷನ್ ಕೊಡುತ್ತಾರೆಯೇ? ಯಾವ ಬೇಸಿಸ್ ಮೇಲೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ನಮ್ಮ ಕಾಲೇಜುಗಳಿಗೆ ರೆಕಗ್‌ನಿಷನ್ ಕೊಡುತ್ತಿದ್ದಾರೆ ಎನ್ನುವುದು ಮೊದಲನೆ ಪ್ರಶ್ನೆ ಇನ್ನು ಎರಡನೆಯದು ನಮಗೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ರೆಕಗ್‌ನಿಷನ್ ಏತಕ್ಕೆ ಬೇಕು? ಐ.ಎಂ.ಸಿ ಇನ್ಸ್‌ಪೆಕ್ಟರ್ಸ್ ಬರುತ್ತಾರಲ್ಲ ಬಂದವರೆಲ್ಲಾ ಅಷ್ಟೆ ಅವರು ವ್ಯವಹಾರ ಮಾಡಿಕೊಳ್ಳುತ್ತಾರೆ ಐದಾರು ಸೀಟುಗಳನ್ನು ತೆಗೆದುಕೊಳ್ಳುತ್ತಾರೆ ಡೆಲ್ಲಿಯಲ್ಲಿ ಅದೊಂದು ದೊಡ್ಡ ವ್ಯವಹಾರ ನಾವು ಇಂಡಿಯನ್ ಮೆಡಿಕಲ್ ಕೌನ್ಸಿಲ್ ಎಂದು ಹೇಳಿಬಿಟ್ಟು ನಾಲ್ಕೈದು ಜನ ಇನ್ಸ್‌ಪೆಕ್ಟರುಗಳನ್ನು ಇನ್ಸ್‌ಪೆಕ್ಷನ್‌ಗೆ ಕಳುಹಿಸುತ್ತೇವೆಂದು ಹೇಳುತ್ತಾರೆ. ಅವರುಗಳಿಗೆ ನಾಲ್ಕೈದು ಸೀಟುಗಳನ್ನು ಕೊಟ್ಟುಬಿಟ್ಟರೆ ಅಶೋಕ ಹೋಟಲಿನಲ್ಲಿ ಅವರು ಮಲಗಲಿಕ್ಕೆ ಏನು ಬೇಕೊ ಎಲ್ಲಾ ಮಾಡಿ ಕಳುಹಿಸಿದರೆ ಏನು ಬೇಕು ಅದನ್ನು ರೆಕಮೆಂಟ್ ಮಾಡುತ್ತಾರೆ ಆಮೇಲೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ ರೆಕಗ್‌ನಿಷನ್ ಸಿಕ್ಕಿದೆ ಎಂದು ಹೇಳುವುದು ನನಗನ್ನಿಸುತ್ತದೆ ಈ ಇಂಡಿಯನ್ ಮೆಡಿಕಲ್ ರೆಕಗ್‌ನಿಷನ್ ನಮಗೆ ಬೇಕಾಗಿಲ್ಲ, ನಮ್ಮ ಯೂನಿವರ್ಸಿಟಿ ನಮ್ಮ ಸ್ಟೇಟ್ ಗೌರ್ನಮೆಂಟ್ ಡಿಗ್ರೀಸ್‌ನ್ನು ರೆಕಮೆಂಡ್ ಮಾಡೋಣ ನಮ್ಮ ಸ್ಟೇಟ್‌ನಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಒಳ್ಳೆಯ ಡಾಕ್ಟರ್ಸ್ ಇದ್ದಾರೆ. ನಮಗೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ ರೆಕಗ್ನೇಷನ್ ಏತಕ್ಕೆ ಬೇಕು ಎಂದು ತಿಳಿಸುತ್ತೀರಾ?

ಶ್ರೀ ಜಿ. ಪುಟ್ಟಸ್ವಾಮಿಗೌಡ : ಇದು ರಾಷ್ಟ್ರೀಯ ನೀತಿ ಅವರು ಹಾಕಿಕೊಂಡಿರತಕ್ಕ ನಾರಂಸನಲ್ಲಿ ಇದು ಇರಬೇಕೆಂದು ಇಟ್ಟುಕೊಂಡಿದ್ದಾರೆ ಆದುದರಿಂದ ಅದು ಬೇಕೇ ಹೊರತು ತಾವು ಹೇಳಿದ ಹಾಗೆ ನಮ್ಮ ರಾಜ್ಯಸರ್ಕಾರಕ್ಕೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರ ರೆಕಗ್ನೇಷನ್ ಅಗತ್ಯವಿಲ್ಲವೆಂದು ನಾನು ತಿಳಿದುಕೊಂಡಿಲ್ಲೇನೆ. ಆದರೆ

ಇದು ರಾಷ್ಟ್ರೀಯ ನೀತಿಯಾಗಿರುವುದರಿಂದ ಈ ಎಲ್ಲ ನಿಯಮಗಳೂ ಕೂಡ ಆ ಒಂದು ಚೌಕಟ್ಟಿನಲ್ಲಿ ಬರುತ್ತದೆ

ಪಿ.ಜಿ.ಆರ್. ಸಿಂಧ್ಯ : ಐ.ಎಂ.ಸಿ. ರೆಕಗ್‌ನಿಷನ್ ಮಾಡುವುದು ಬೇಡ ಎಂದು ನೀವು ಹೇಳಿ.

ಅಧ್ಯಕ್ಷರು : ಮಾನ್ಯ ಸದಸ್ಯರು ಬಹಳ ಪ್ರಮುಖವಾದ ವಿಚಾರವನ್ನು ಎತ್ತಿದ್ದಾರೆ. ಮುಂದೆ ಹೆಲ್ತ್ ಡಿಪಾರ್ಟ್‌ಮೆಂಟ್‌ನ ಡಿಮ್ಯಾಂಡ್ ಬಂದಾಗ ಇದರ ಬಗ್ಗೆ ಸುಧೀರ್ಘವಾದಂಥ ಚರ್ಚೆ ನಡೆಯಲಿ.

ಬೆಂಗಳೂರಿನಲ್ಲಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಲ್ಲಿ ನಷ್ಟ

2341 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತದ ಸಂಸ್ಥೆಯ ತಯಾರಿಕೆಯನ್ನು ಖಾಸಗಿ ಕಂಪನಿಯಾಗಿ ಶುರು ಮಾಡಿ ನಂತರದಲ್ಲಿ ಸಾರ್ವಜನಿಕ ಲಿಮಿಟೆಡ್ ಕಂಪನಿಯಾಗಿ ಪರಿವರ್ತಿತವಾದದ್ದು ನಿಜವೇ?

ಆ) ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ಕಂಪನಿಯು ಪಬ್ಲಿಕ್ ಲಿಮಿಟ್ರೆಡ್ ಕಂಪನಿಯಾಗಿ ಪರಿವರ್ತನೆ ಹೊಂದಿದ ನಂತರ ಅದರ ಲಾಭ ನಷ್ಟಗಳ ವಿವರ ಕೊಡುವುದು.

ಇ) ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ಸಂಸ್ಥೆಯ ವಸ್ತುಗಳನ್ನು ಎಂ. ಎಸ್.ಐ.ಎಲ್ ಸಂಸ್ಥೆಯಿಂದ ಮಾರಾಟ ಮಾಡಿದ್ದರಿಂದ ನಷ್ಟ ಅನುಭವಿಸಿರುವುದು ನಿಜವೇ?

ಈ) ಎಂ.ಎಸ್.ಐ.ಎಲ್. ಸಂಸ್ಥೆಯಿಂದ ಮಾರಾಟವನ್ನು ಹಿಂತೆಗೆದುಕೊಂಡ ನಂತರ ಈ ಸಂಸ್ಥೆಯ ಮಾರಾಟದಲ್ಲಿ ಏನಾದರೂ ಸುಧಾರಣೆ ಆಗಿದೆಯೇ?

ಉ) ಈ ಸಂಸ್ಥೆಯು ಅನುಭವಿಸಿದ ನಷ್ಟವನ್ನು ತುಂಬಿಕೊಡಲು ಕೈಗೊಂಡ ಕ್ರಮಗಳೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು)

ಅ) ಇಲ್ಲ

ಆ) ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ ಸಂಸ್ಥೆಯು ಅದರ ಸ್ಥಾಪನೆಯ ವರ್ಷದಿಂದಲೂ ನಷ್ಟ ಅನುಭವಿಸುತ್ತಿದೆ ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.

ಇ) ಇಲ್ಲ

ಈ) ಇಲ್ಲ

ಉ) ಈ ಸಂಸ್ಥೆಯ ರೂ 11.6 ಕೋಟಿಯ ಪುನರ್ ಸಜ್ಜೀಕರಣ ಪ್ರಸ್ತಾವನೆಯನ್ನು ಒಪ್ಪಿದೆ. ಇದರಿಂದಾಗಿ ಅದರ ಕಾರ್ಯನಿರ್ವಹಣೆಯಲ್ಲಿ ಸುಧಾರಣೆಯಾಗುವುದೆಂದು ಭಾವಿಸಲಾಗಿದೆ.